ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 134-139
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪ್ರಗತಿಶೀಲ ಸಾಹಿತ್ಯ ಸಂಶೋಧನೆ ಹೊಸ ಸಾಧ್ಯತೆಗಳು

**ಡಾ. ಗಿರೀಶ ದೇಸೂರ**

ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ ತಾಲೂಕು ಮತ್ತು ಜಿಲ್ಲೆ.

***Abstract:***

*ಒಂಭತ್ತನೆಯ ಶತಮಾನದಿಂದ ಇಂದಿನವರೆಗೂ ಅವ್ಯಾಹತವಾಗಿ ಪ್ರವಹಿಸಿದ ಕನ್ನಡ ಸಾಹಿತ್ಯ ವಾಹಿನಿಯು ಕಾಲಕಾಲಕ್ಕೆ ಹೊಸ ಆಳ, ವಿಸ್ತಾರಗಳನ್ನು ಪಡೆಯುತ್ತಾ ಬಂದಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 20ನೇ ಶತಮಾನದ ಸಾಹಿತ್ಯ ಕೃತಿಗಳು ತಮ್ಮ ಅಂತಃಸತ್ವ, ಆಧುನಿಕ ಮನೋಧರ್ಮ ಹಾಗೂ ಪ್ರಯೋಗಶೀಲ ಗುಣಗಳಿಂದ ಕ್ರಾಂತಿಯ ಕಹಳೆ ಊದಿವೆ. ಪ್ರಸ್ತುತ ಲೇನದಲ್ಲಿ ಪ್ರಗತಿಶೀಲ ಸಾಹಿತ್ಯ ಸಂಶೋಧನೆ ಹೊಸ ಸಾಧ್ಯತೆಗಳ ಕುರಿತು ಚರ್ಚಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ ಚರಿತ್ರೆ, ಪ್ರಗತಿಶೀಲ ಸಾಹಿತ್ಯ, ಸಂಶೋಧನಾ ಸಾಧ್ಯತೆಗಳು.*

## ಪೀಠಿಕೆ

ಪ್ರಗತಿಶೀಲ ಸಾಹಿತ್ಯ ಚಳವಳಿಯ ಕಾಲ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅತ್ಯಂತ ಚಲನಶೀಲವಾದ ಸಂದರ್ಭ. ಸಾಹಿತ್ಯವನ್ನು ಸಾಮಾಜಿಕ ಬದಲಾವಣೆಯ ಉದ್ದೇಶದ ಪ್ರಭಾವಶಾಲಿ ಉಪಕರಣವೆಂದು, ಮಾಧ್ಯಮವೆಂದು ಪ್ರಗತಿಶೀಲ ಲೇಖಕರು ನಂಬಿದ್ದರು. ಸಾಹಿತಿಯು ವ್ಯಕ್ತಿಕೇಂದ್ರಿತ ಆತ್ಮೋಲ್ಲಾಸಪರತೆಯಲ್ಲಿ ಮಗ್ನನಾಗಿ ಸಾಮಾಜಿಕ ಹೊಣೆಗಾರಿಕೆಯನ್ನು ಮರೆತಂಥ ಸಂದರ್ಭದಲ್ಲಿ 'ಪ್ರಗತಿಶೀಲ ಸಾಹಿತ್ಯ' ಎಂಬ ಹೊಸ ಸಾಹಿತ್ಯಿಕ ಚಳುವಳಿಯು ಸಾಹಿತ್ಯ ವಾಸ್ತವಕ್ಕೆ ಸ್ಪಂದಿಸಬೇಕೆಂಬ ಆಶಯದಿಂದ ಪ್ರೇರಿತವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿತು. 'ಸಾಹಿತ್ಯ ಪಂಡಿತರ ವಿವಿಧ ಕಳಾಮಂಡಿತರ ಸ್ವತ್ತೆಂಬ ಭಾವನೆ ದೇಶದ ಸರ್ವತೋಮುಖ ಪ್ರಗತಿಗೆ ಹಾನಿಕಾರಕವಾದುದೆಂಬ ಸತ್ಯ ನಿತ್ಯವಾಗುತ್ತಿದೆ. ಸಾಹಿತಿಯ ಧ್ಯೇಯ ಆತ್ಮೋಲ್ಲಾಸಪರತೆಯಲ್ಲ, ಸ್ವಪ್ರತಿಷ್ಠಾ ಪ್ರಸಾರವೂ ಅಲ್ಲ. ಅವನು ದೇಶವನ್ನು ಕಟ್ಟುವ ಶಿಲ್ಪಿಗಳಲ್ಲಿ ಒಬ್ಬ. ಅವನ ಮಹಾಯುಧ ಲೇಖನಿ. ಅದರ ಪ್ರಭಾವದಿಂದ ಅವನು ಸತ್ತವರನ್ನು ಬದುಕಿಸಬಲ್ಲ; ಬದುಕಿದವರನ್ನು ಸಾಯಿಸಬಲ್ಲ, ಲೇಖಕನ ಬಾಳು ಸ್ವಾತಂತ್ರ್ಯ, ನಿರ್ಭೀತಿ ವಿಚಾರಗಳಿಂದ ಹುರಿಗೊಂಡು ನಾಡಿಗೆ ಮಾದರಿಯಾಗಬೇಕು. ಮಾನವ ಕಲ್ಯಾಣ ಸಾಧನೆ ಅವನ ಗುರಿಯಾಗಬೇಕು. ಅಂದಾಗಲೇ ಅವನ ಕೃತಿ ಜೀವಂತವಾದ ಕೃತಿಯಾಗುತ್ತದೆ' ಎಂಬುದು ಪ್ರಗತೀಶೀಲರ ಅಭಿಪ್ರಾಯ.

## ಪ್ರಗತಿಶೀಲ ಸಾಹಿತ್ಯ ಸಂಶೋಧನೆಯ ಹೊಸ ಸಾಧ್ಯತೆಗಳು

ಸಮಾಜದ ಬಾಹ್ಯ ಆಚಾರ ವಿಚಾರಗಳೆಲ್ಲ ಬೂಟಾಟಿಕೆಯವು. ಹೊರಗೆ ಸೌಜನ್ಯ, ಸಭ್ಯತೆಯ ಹೆಸರಿನಲ್ಲಿ ಕಾಣಿಸಿಕೊಳ್ಳುವ ಮುಖ ಸುಳ್ಳು, ಅವುಗಳನ್ನು ಬಯಲಿಗೆಳೆಯುವುದರಿಂದ ಸಮಾಜದ ಕ್ರೂರ ನಿಜರೂಪದ ದರ್ಶನವಾಗುತ್ತದೆ. ಸಮಾಜದ

***Please cite this article as:*** ಗಿರೀಶ ದೇಸೂರ. (2024). ಪ್ರಗತಿಶೀಲ ಸಾಹಿತ್ಯ ಸಂಶೋಧನೆ ಹೊಸ ಸಾಧ್ಯತೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 3(3), 134–139

ಆರ್ಥಿಕ, ನೈತಿಕ, ಮತ್ತು ಇತರ ವಾಸ್ತವಗಳು ದೀನ, ದಲಿತ ವ್ಯಕ್ತಿಯನ್ನು ಅಥವಾ ಸಮೂಹವನ್ನು ಮಾನವೀಯವಾಗಿ ಕಾಣದೆ ಕ್ರೂರವಾಗಿ ಕಾಣುವಂತೆ ಇವೆ. ಈ ಕ್ರೌರ್ಯದ ಒತ್ತಡ ತಾಳಲಾರದ ದೀನದಲಿತರು, ಅವರ ನಂಬಿಕೆಗಳು, ಆದರ್ಶಗಳು ಅದರಡಿಯಲ್ಲಿ ಸಿಕ್ಕಿ ನುಚ್ಚು ನೂರಾಗುತ್ತವೆ. ಸಾಮಾಜಿಕ ನ್ಯಾಯ ದೊರೆಯಬೇಕಾದರೆ ಸಾಮಾಜಿಕ ವ್ಯವಸ್ಥೆ ಬದಲಾಗಬೇಕು. ಎಂಬುದು ಪ್ರಗತಿಶೀಲರ ಪೂರ್ವಗ್ರಹಿಕೆ.

ಪ್ರಗತಿಶೀಲರ ಬರವಣಿಗೆ ಸಹಜವಾಗಿಯೆ ಇಹದ ಬದುಕಿಗೆ ಅಥವಾ ಸಮಾಜಕ್ಕೆ ಸಂಪೂರ್ಣವಾಗಿ ಬದ್ಧವಾದದ್ದಾಯಿತು. ವಿಚಾರವಾದ ಪ್ರೇರಿತ ಬರವಣಿಗೆ ಕನ್ನಡದಲ್ಲಿ ಪ್ರಗತಿಶೀಲರಿಂದಲೇ ಪ್ರಾರಂಭವಾಯಿತು ಎಂಬುವುದು ಮುಖ್ಯವಾದ ವಿಚಾರ.

ಕನ್ನಡ ಕಾದಂಬರಿಲೋಕ ಸತ್ವದಲ್ಲಿ, ಸಮೃದ್ಧಿಯಲ್ಲಿ ಬೆರಗುಹುಟ್ಟಿಸುವಂತಿದೆ. ಸಾಮಾಜಿಕ ಕಳಕಳಿಯನ್ನು, ಸ್ಪಂದನವನ್ನು ಪ್ರಾರಂಭದಿಂದಲೂ ಅದು ಒಳಗೊಂಡಿದೆ. ಸಮಕಾಲೀನ ಸಮಸ್ಯೆಗಳನ್ನು, ಸಮಷ್ಟಿಯ, ವ್ಯಷ್ಟಿಯ ಬೇಕು ಬೇಡಗಳನ್ನು ಕಾದಂಬರಿಕಾರರು ಗುರುತಿಸಿದ್ದಾರೆ, ಚರ್ಚಿಸಿದ್ದಾರೆ. ಸಮಾಜಶಾಸ್ತ್ರ, ಮಾನವಶಾಸ್ತ್ರಗಳು ಇನ್ನೂ ತಲೆಯೆತ್ತುವ ಹಂತದಲ್ಲಿದ್ದಾಗ ಅವುಗಳ ಜವಾಬ್ದಾರಿಯನ್ನು ಕಾದಂಬರಿಗಳು ನಿರ್ವಹಿಸಿವೆ. ಸಂಸ್ಕೃತಿಯ ಅಧ್ಯಯನದ, ಮಾನವ ಸ್ವಭಾವ–ವರ್ತನೆಗಳ ಅಧ್ಯಯನದ ಮೂಲ ಆಕರಗಳಂತೆ ಅನೇಕ ಕಾದಂಬರಿಗಳು ದಾಖಲೆಗಳಾಗಿವೆ.

ಕನ್ನಡ ಕಾದಂಬರಿ ನವೋದಯ, ಪ್ರಗತಿಶೀಲ, ನವ್ಯ ಹಾಗೂ ನವ್ಯೋತ್ತರ ಕಾಲಖಂಡಗಳಲ್ಲಿ ಹಲವಾರು ವಿಚಾರಧಾರೆಗಳ ಪ್ರಭಾವದಿಂದ ಹಾಗೂ ಹೊಸ ಪ್ರಯೋಗಗಳಿಂದ ಸ್ಥಿತ್ಯಂತರಗಳನ್ನು ಕಂಡರೂ ಅದು ಮುಖ್ಯವಾಗಿ ವಾಸ್ತವವಾದದ ಪರಂಪರೆಯಾಗಿಯೇ ಉಳಿದುಕೊಂಡಿತು ಎನ್ನುವುದು ಮಹತ್ವದ್ದಾಗಿದೆ. ಜಿ.ಎಸ್. ಆಮೂರ ಅವರು ಈ ಪರಂಪರೆಯ ಒಳಗೆ ಎರಡು ಪ್ರವಾಹಗಳನ್ನು ಗುರುತಿಸುತ್ತಾರೆ. ಮೊದಲನೆಯದನ್ನು ಕಾರಂತ ಪರಂಪರೆ ಎಂದು ಕರೆದು ಇದರ ಮುಖ್ಯ ಲಕ್ಷಣ ಅನುಭವ ನಿಷ್ಠತೆ ಹಾಗೂ ಪ್ರಯೋಗಪ್ರಿಯತೆ ಎಂದು ಹೇಳುತ್ತಾರೆ. ಎರಡನೆಯದನ್ನು ಅ.ನ.ಕೃ.ರವರ ಹೆಸರಿಗೆ ಜೋಡಿಸುತ್ತಾರೆ. ಇದರ ಮುಖ್ಯ ಲಕ್ಷಣ ಸಮಸ್ಯಾ ನಿಷ್ಠತೆ ಹಾಗೂ ರೀತಿ ಪ್ರಾಧಾನ್ಯತೆ ಎಂದು ಹೇಳುತ್ತಾರೆ. "ಎರಡೂ ಪ್ರವಾಹಗಳ ಉಗಮವನ್ನು ವಾಸ್ತವವಾದದಲ್ಲಿಯೇ ಕಾಣಬಹುದಾದರೂ ಅವುಗಳ ಸ್ವರೂಪ, ಅವು ಸೃಷ್ಟಿಸುವ ಆಕೃತಿಗಳು, ವಾಸ್ತವವನ್ನು ಅವು ಗ್ರಹಿಸುವ ವಿಧಾನಗಳು ಇವುಗಳಲ್ಲಿ ಭಿನ್ನತೆಯಿದೆ. ಕನ್ನಡದ ಪ್ರಮುಖ ಕಾದಂಬರಿಕಾರರಾದ ರಾವ್ ಬಹದ್ದೂರ್, ಅನಂತಮೂರ್ತಿ, ಚಿತ್ತಾಲ, ತೇಜಸ್ವೀ, ಲಂಕೇಶ್, ದೇವನೂರರು ಒಂದಿಲ್ಲೊಂದು ರೀತಿಯಿಂದ ಕಾರಂತ ಪರಂಪರೆಗೆ ಸಂಬಂಧ ಹೊಂದಿದವರಾದರೆ, ನಿರಂಜನ, ಚದುರಂಗ, ಕಟ್ಟೀಮನಿ, ಬಲ್ಲಾಳ, ಭೈರಪ್ಪ ಮೊದಲಾದವರು ಅ.ನ.ಕೃ ಪರಂಪರೆಯನ್ನೇ ಮುಂದುವರೆಸಿದ್ದಾರೆ ಎಂದು ಹೇಳಬಹುದು."[1]

ಕನ್ನಡ ಕಾದಂಬರಿಯ ಕ್ಷೇತ್ರದಲ್ಲಿ ಪ್ರಕೃತಿ–ಸಂಸ್ಕೃತಿ ಸಂವಾದ ಸಾಮಾನ್ಯವಾಗಿ ಎಲ್ಲ ಪ್ರಮುಖ ಕಾದಂಬರಿಕಾರರಲ್ಲಿಯೂ ಕಾಣಿಸಿಕೊಂಡಿದೆ. ಕುವೆಂಪು, ಕಾರಂತ, ಅನಂತಮೂರ್ತಿ, ತೇಜಸ್ವೀ, ಲಂಕೇಶ್, ದೇವನೂರು ಮಹಾದೇವ ಮೊದಲಾದವರಲ್ಲಿ ಸಂಸ್ಕೃತಿಯ ಸಂವಾದ ಕಾಣಿಸಿಕೊಂಡಿದೆ ಎಂದು ಹೇಳುತ್ತಾ ಜಿ.ಎಸ್.ಆಮೂರ ಅವರು "ಈ ಚರ್ಚೆಯನ್ನು ಉಳಿದ ಕಾದಂಬರಿಕಾರರ ಕೃತಿಗಳಿಗೂ ಮುದುವರಿಸಬಹುದು"[2] ಎಂದು ಹೇಳುತ್ತಾರೆ.

ಈ ಹಿನ್ನೆಲೆಯಲ್ಲಿ ಈ 'ಸಂಸ್ಕೃತಿ ಸಂವಾದ' ಪ್ರಗತಿಶೀಲ ಲೇಖಕರ ಕೃತಿಗಳಲ್ಲಿ ಹೇಗೆ

1. ಆಮೂರ, ಜಿ. ಎಸ್. (1994). *ಕನ್ನಡ ಕಥನ ಸಾಹಿತ್ಯ: ಕಾದಂಬರಿ.* ಪುಟ. 464
2. ಅದೇ, ಪುಟ. 469

ಕಾಣಿಸಿಕೊಂಡಿದೆ ಎಂಬುವುದನ್ನು ಅಧ್ಯಯನಕ್ಕೊಳಪಡಿಸಲು ಅವಕಾಶವಿದೆ. ಪ್ರಗತಿಶೀಲ ಚಳವಳಿ ರಾಜಕೀಯ, ಸಾಮಾಜಿಕ, ಆರ್ಥಿಕ ಮೂಲಚಿಂತನೆಯ ನೆಲೆಯಿಂದ ಹುಟ್ಟಿದ್ದಾಗಿತ್ತು. ಸಾಹಿತ್ಯ ತತ್ವದ ಮೂಲದಿಂದ ಹುಟ್ಟಿದ್ದಾಗಿರಲಿಲ್ಲ. ಸಾಹಿತ್ಯವನ್ನು ಸಾಮಾಜಿಕ ಬದಲಾವಣೆಯ ಉದ್ದೇಶದ ಈಡೇರಿಕೆಗಾಗಿ ಪ್ರಭಾವಶಾಲಿ ಉಪಕರಣವೆಂದು, ಮಾಧ್ಯಮವೆಂದು ಅವರು ಬಳಸಿದರು. ಆದ್ದರಿಂದ ಸಮಗ್ರವಾದ ಹೊಸ ಸಾಹಿತ್ಯ ಸಿದ್ಧಾಂತದ ಅಗತ್ಯ ಅವರಿಗೆ ಕಾಣಿಸಲಿಲ್ಲ. ಸಿದ್ಧ ಸಾಹಿತ್ಯ ಪ್ರಕಾರಗಳನ್ನು ಪರಿಕಲ್ಪನೆಗಳನ್ನು ತಮ್ಮ ಅಗತ್ಯಕ್ಕೆ, ಉದ್ದೇಶಕ್ಕೆ ಅನುಗುಣವಾಗಿ ಬಳಸಿಕೊಂಡರು. ಕಥೆ, ಕಾದಂಬರಿ ಅವರು ಆಯ್ಕೆ ಮಾಡಿಕೊಂಡ ಮುಖ್ಯ ಸಾಹಿತ್ಯ ಪ್ರಕಾರಗಳಾದವು. ಹೊಸ ವಿಚಾರವಾದದ ಮೂಲಕ ಅವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶಿಸಿದರು.

ಭಾರತೀಯ ಸಂಸ್ಕೃತಿಯನ್ನು ಶ್ರೇಣೀಕೃತ ಜಾತಿ ವ್ಯವಸ್ಥೆಯ ಮೇಲು ನೆಲೆಯಲ್ಲಿದ್ದವರ ಕಡೆಯಿಂದ ಅರ್ಥವಿಸಿ ವ್ಯಾಖ್ಯಾನಿಸುವ, ವೈಭವೀಕರಿಸುವ ನವೋದಯ ಕಾಲದ ದೃಷ್ಟಿಯನ್ನು ಪ್ರಗತಿಶೀಲರು ಪ್ರಶ್ನಿಸಿದರು. ಪ್ರಗತಿಶೀಲರಲ್ಲಿ ವರ್ಗದ ನೆಲೆಯಿಂದ, ಶೋಷಿತರ ಹಾಗೂ ಕೆಳನೆಲೆಯವರ ಅನುಭವದ ಕಡೆಯಿಂದ ಸಂಸ್ಕೃತಿ ಮತ್ತು ಸಾಹಿತ್ಯ ಸಂದರ್ಭವನ್ನು ಪುನಾರಚಿಸಿಕೊಳ್ಳುವ ಮನೋಧರ್ಮ ವ್ಯಕ್ತವಾಯಿತು. ಇದು ಮುಂದೆ ಬಂದ ದಲಿತ–ಬಂಡಾಯ ಸಾಹಿತ್ಯಕ್ಕೆ ಹಿನ್ನೆಲೆಯನ್ನು ಒದಗಿಸಿತು. ದಲಿತ–ಬಂಡಾಯದಲ್ಲಿ ಪ್ರಗತಿಶೀಲ ಮತ್ತು ಬರಹಗಾರರ ಒಕ್ಕೂಟದ ಚಿಂತನೆಗಳು ವಿಲೀನವಾಗಿ ಹೊಸ ವ್ಯಾಪ್ತಿ, ಹೊಸ ಆಯಾಮಗಳನ್ನು ಪಡೆದುಕೊಂಡವು. ಹೀಗೆ ಪ್ರಗತಿಶೀಲ ಸಾಹಿತ್ಯವನ್ನು ವಿಭಿನ್ನ ಪರೀಪ್ರೇಕ್ಷ್ಯದಲ್ಲಿ ಅಧ್ಯನಕ್ಕೊಳಪಡಿಸಲು ಅವಕಾಶವಿದೆ.

ಪ್ರಗತಿಶೀಲ ಲೇಖಕರು ಸಾಹಿತ್ಯವನ್ನು ಸಾಮಾನ್ಯ ಜನರ ಓದಿಗೆ ತಲುಪಿಸಿದ ಜನರಿಗೆ ಅರ್ಥವಾಗುವಂತೆ ಬರೆಯುವ ಕಳಕಳಿಯೊಂದಿಗೆ ಜನರಿಗೆ ತಲುಪಿಸಬೇಕಾದದ್ದೇನು ಎಂಬುದರ ಬಗ್ಗೆಯೂ ಅವರಿಗೆ ಖಚಿತ ನಿಲುವುಗಳಿದ್ದವು. ಪ್ರಗತಿಶೀಲ ಲೇಖಕರ ವಿಚಾರಗಳ ಕುರಿತು ನಿಜಕ್ಕೂ ರಚನಾತ್ಮಕ ಚರ್ಚೆ ನಡೆಯಿತೇ ಎಂದು ಈಗ ಮರುಚಿಂತನೆ ಮಾಡಬೇಕಾದ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲಿ ಅವರ ಕೃತಿಗಳನ್ನು ಮರು ಓದಿಗೆ ಒಳಪಡಿಸಿ ಹೊಸ ಒಳನೋಟಗಳನ್ನು ಪಡೆಯಲು ಅವಕಾಶವಿದೆ.

ಪ್ರಗತಿಶೀಲ ಚಳುವಳಿಯ ಮುಖ್ಯ ಬರಹಗಾರರಾದ ಅ.ನ.ಕೃ., ಬಸವರಾಜ ಕಟ್ಟೀಮನಿ, ನಿರಂಜನ, ತರಾಸು, ಚದುರಂಗರ ಕೃತಿಗಳನ್ನು ಈಗ ಓದುವಾಗ, ಅವರು ತಮ್ಮ ಬರಹದ ಸಂದರ್ಭದಲ್ಲಿ ಕಟ್ಟಿಕೊಂಡಿದ್ದ ತಾತ್ವಿಕ ನಿರ್ದೇಶನಗಳನ್ನು ಮೀರಿ ಅವರ ಕೃತಿಗಳು ವಿಭಿನ್ನ ಪರೀಪ್ರೇಕ್ಷ್ಯದಲ್ಲಿ ಗ್ರಹಿಕೆಗೆ ಒಳಗಾದುದನ್ನು ಗಮನಿಸಬಹುದು. ಆ ಕಾಲದ ಹತ್ತು ಹಲವು ಅಪೇಕ್ಷೆಗಳು, ಒಳಸುಳಿಗಳು, ಬದುಕಿನ ಸಮಸ್ಯೆಗಳು ಅವರ ಕೃತಿಗಳಲ್ಲಿ ಅಂತರ್ಜಾಲದಂತೆ ಬಚ್ಚಿಟ್ಟುಕೊಂಡಿರುವುದು ಕುತೂಹಲದ ಸಂಗತಿಯಾಗಿ ನಮ್ಮನ್ನು ಕಾಡುತ್ತದೆ. ಅವೆಲ್ಲವುಗಳನ್ನೂ ಪರಿಶೀಲಿಸಿ, ಪರಿಶೋಧಿಸುವ ಹೊಸ ಸಾಧ್ಯತೆಗಳು ನಮ್ಮ ಮುಂದಿವೆ.

ಪ್ರಗತಿಶೀಲ ಸಾಹಿತ್ಯ ನಮ್ಮ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದುಕೊಟ್ಟಿತು. ನವೋದಯ ಕಾಲದ ಲೇಖಕರಿಗಿಂತ ಭಿನ್ನವಾಗಿ ಬರೆಯತೊಡಗಿದ ಪ್ರಗತಿಶೀಲರಲ್ಲಿ ವಾಸ್ತವತೆ, ಶೋಷಿತ ಜನಾಂಗದ ಚಿತ್ರಣ ಮಹತ್ವದ ಸ್ಥಾನ ಪಡೆದವು. ಕಲಾತ್ಮಕತೆ ಅವರ ಕಾದಂಬರಿಗಳಲ್ಲಿ ಗೌಣವೆನಿಸಿದರೂ, ಅನುಭವದ ಸರಳೀಕರಣಕ್ಕೆ ಪಕ್ಕಾಗಿದ್ದರೂ ಪ್ರಗತಿಶೀಲ ಧೋರಣೆ ಸಾಧಿಸಿದ್ದು ಕಡಿಮೆ ಎನ್ನುವಂತಿಲ್ಲ. ‘ಇಡೀ ಸಮಾಜದ ಚಾರಿತ್ರಿಕ ಸಂದರ್ಭದಲ್ಲಿ ಪ್ರಗತಿಶೀಲ ಸಾಹಿತ್ಯವನ್ನು ತೂಗಿದಾಗ ಅದಕ್ಕೆ ಮೌಲ್ಯ ಬರುತ್ತದೆ. ಮೊದಲನೆಯದಾಗಿ ಅ.ನ.ಕೃ ಮತ್ತು ಅವರ ಪಂಥದವರು ಓದುಗ ವರ್ಗವನ್ನು ಹಿಗ್ಗಿಸಿದರು. ಅಲ್ಲದೆ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆಗೆ ಮಹತ್ವ

ಬಂದಿತು. ಸಮಾಜದ ಸಮಸ್ಯೆಗಳ ಇರವಿನ ತಿಳುವಳಿಕೆಯಷ್ಟೇ ಸಾಮಾಜಿಕ ಪ್ರಜ್ಞೆಯಲ್ಲ ಎಂಬುದು ನಿಜ. ಆದರೆ ನಾವು ಬಯಸುವ, ನಿರೀಕ್ಷಿಸುವ ಸಾಮಾಜಿಕ ಪ್ರಜ್ಞೆ ಮೂಡಲು ಮೊದಲು ಅಗತ್ಯವಾಗಿರುವುದು ಸಮಾಜದ ಸಮಸ್ಯೆಗಳನ್ನು ಕುರಿತು ನಿರ್ಭಯವಾಗಿ ಬರೆಯುವುದಕ್ಕೆ ಅವಕಾಶವಿರುವ ವಾತಾವರಣ. ಇಂತಹ ವಾತಾವರಣವನ್ನು ನಿರ್ಮಿಸುವಲ್ಲಿ ಪ್ರಗತಿಶೀಲ ಸಾಹಿತ್ಯ ಪ್ರಮುಖ ಪಾತ್ರವಹಿಸಿತು.' ಎಂಬ ವಿಮರ್ಶಕರ ಅಭಿಪ್ರಾಯ ಪ್ರಗತಿಶೀಲ ಸಾಹಿತ್ಯದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಈ ದೃಷ್ಟಿಯಿಂದ ಅ.ನ.ಕೃ ಅವರೂ ಹಾಗೂ ಅವರ ಪ್ರಗತಿಶೀಲ ಗೆಳೆಯರೂ ಮಾಡಿದ ಸಾಧನೆ ನಮ್ಮ ಸಾಹಿತ್ಯ ಇತಿಹಾಸದಲ್ಲಿ ಮರೆಯದಂಥ ಅಧ್ಯಾಯವಾಗಿದೆ.

ಪ್ರಗತಿಶೀಲ ಲೇಖಕರಲ್ಲಿ ಸಂಸ್ಕೃತಿಯ ಚಿಂತನೆ ಮತ್ತು ವಿಚಾರವಾದದ ನಡುವೆ ಅಂತರ್‌ಸಂಬಂಧ ಏರ್ಪಡುತ್ತದೆ. ಸಂಸ್ಕೃತಿ ಚಿಂತನೆಯು ಪ್ರಗತಿಶೀಲರಲ್ಲಿ ನವೋದಯದವರ ಚಿಂತನೆಗಿಂತ ಬೇರೆಯಾಯಿತು. ಅವರ ಬರಹಗಳಲ್ಲಿ ಸಂಸ್ಕೃತಿಯೆಂಬ ಪದದ ಅರ್ಥ ಬದಲಾಯಿತು ಎಂಬುದು ಕೂಡಾ ನಿಜ. ಅದು ಬರಿಯ 'ಆದರ್ಶ' ಮೌಲ್ಯಗಳ ಕ್ರೋಢೀಕರಣವಾಗದೆ ಸಾಮಾಜಿಕ ವಾಸ್ತವದೊಂದಿಗೆ ಸಂಬಂಧ ಪಡೆಯಿತು. ಪ್ರಗತಿಶೀಲರು ಸಂಸ್ಕೃತಿಯನ್ನು ಜನಸಾಮಾನ್ಯರ ಮೂಲಕ ನಿರ್ವಚಿಸಲು ಪ್ರಯತ್ನಿಸುತ್ತಾರೆ. ಈ ನೆಲೆಯಲ್ಲಿ ಅಧ್ಯಯನದ ಸಾಧ್ಯತೆಯಿದೆ.

ಪ್ರಗತಿಶೀಲರ ಮಹತ್ವದ ಸಾಧನೆಯೆಂದರೆ ಕಾದಂಬರಿ ಮತ್ತು ಕಥಾ ಕ್ಷೇತ್ರದ ಸೀಮೆಗಳನ್ನು ವಿಸ್ತರಿಸಿದರು. ಮಾನವೀಯವಾದದ್ದಾವುದನ್ನೂ ಅವರು ತಮ್ಮ ಕೃತಿಗಳಿಂದ ಹೊರಗಿಡಲಿಲ್ಲ. ಉಪನಿಷತ್ತುಗಳಿಂದ ಹಿಡಿದು ವೇಶ್ಯಾವೃತ್ತಿಯವರೆಗೆ ಮಾನವನ ಅನುಭವಕ್ಕೆ ಬಂದ ಎಲ್ಲ ವಿಷಯಗಳನ್ನೂ ಅವರ ಕೃತಿಗಳು ಒಳಗೊಳ್ಳಲು ಪ್ರಯತ್ನಿಸಿದವು. ಲೈಂಗಿಕತೆಯ ಬಗ್ಗೆ ಅವರಿಟ್ಟುಕೊಂಡ ಉದಾರ ಧೋರಣೆಯಿಂದಾಗಿ ಅವರು ಟೀಕೆಗೊಳಗಾಗಬೇಕಾಯಿತು. ವಾಚನೀಯತೆ ಮತ್ತು ವಸ್ತು ವೈವಿಧ್ಯ ಅವರ ಕಾದಂಬರಿಗಳ ಮತ್ತು ಕಥೆಗಳ ಮುಖ್ಯ ಸಾಧನೆ. ಸಂಪ್ರದಾಯ ಮತ್ತು ಆಧುನಿಕತೆಗಳ ಹೋರಾಟದಲ್ಲಿ ಸಿಕ್ಕಿ ಬದಲಾಗುತ್ತಿರುವ ಸಮಾಜದ ಬೃಹತ್ ಚಿತ್ರವನ್ನೇ ಪ್ರಗತಿಶೀಲ ಲೇಖಕರಕೃತಿಗಳು ತೆರೆದು ತೋರಿಸುತ್ತವೆ. ಸಾಹಿತ್ಯವನ್ನು ಸಾಮಾನ್ಯ ಜನತೆಗೆ ಮುಟ್ಟಿಸುವುದು ಪ್ರಗತಿಶೀಲ ಲೇಖಕರ ಗುರಿಯಾಗಿತ್ತು. ಈ ಹಿನ್ನೆಲೆಯಲ್ಲಿ ಜನಪ್ರಿಯತೆ ಹಾಗೂ ಪ್ರಗತಿಶೀಲ ಸಾಹಿತ್ಯದ ಸಾಧನೆಯ ಕುರಿತು ಸಂಶೋಧನೆ ಕೈಗೊಳ್ಳಬಹುದು.

ಜಿ.ಎಚ್. ನಾಯಕ್ ಅವರು ತಮ್ಮ 'ಸಾಹಿತ್ಯ ಸಮೀಕ್ಷೆ' ಎಂಬ ಕೃತಿಯಲ್ಲಿ ಪ್ರಗತಿಶೀಲರ ಸಾಹಿತ್ಯದ ಕುರಿತು ಅನೇಕ ಹೊಸ ವಿಚಾರಗಳನ್ನು ಹೇಳಿದ್ದಾರೆ. ಅವರು ಹೇಳುವಂತೆ ಪ್ರಗತಿಶೀಲ ಚಳುವಳಿ ಸಾಹಿತ್ಯ ತತ್ವದ ಮೂಲದಿಂದ ಹುಟ್ಟಿರದೇ ರಾಜಕೀಯ, ಸಾಮಾಜಿಕ, ಆರ್ಥಿಕ ಮೂಲ ಚಿಂತನೆಯ ನೆಲೆಯಿಂದ ಹುಟ್ಟಿದ್ದಾಗಿತ್ತು. ಸಮತಾವಾದೀ ವಿಚಾರವಾದದ ಆಕರ್ಷಣೆಗೆ ಒಳಗಾಯಿತು. ಪ್ರಗತಿಶೀಲ ಚಳುವಳಿ ಕರ್ನಾಟಕದಲ್ಲಿ ಪ್ರಾರಂಭವಾದಾಗ (1943) ಸ್ವಾತಂತ್ರ್ಯ ಹೋರಾಟ ನಿರ್ಣಾಯಕ ಘಟ್ಟ ತಲುಪಿತ್ತು. ಮೈಸೂರು ಸಂಸ್ಥಾನದಲ್ಲಿ ನಡೆದ ಆನಂತರದ ('ಭಾರತ ಬಿಟ್ಟು ತೊಲಗಿ' ಚಳುವಳಿಯ ನಂತರದ) ಕಾಲದ ಸ್ವಾತಂತ್ರ್ಯ ಹೋರಾಟಕ್ಕೆ ಭಾರತೀಯ ಸಂಸ್ಕೃತಿಯನ್ನು ವೈಭವೀಕರಿಸುವ ಪ್ರಶ್ನೆ ಎದುರಾಗಿರಲಿಲ್ಲ. ಅಂಥ ಕಾಲಘಟ್ಟದಲ್ಲಿ ಮತ್ತು ಆನಂತರದಲ್ಲಿ ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಮೆರೆಸುವ ಹಾಗೂ ಸಾಂಪ್ರದಾಯಿಕ ಮೌಲ್ಯಗಳನ್ನು ಕೀರ್ತಿಸುವ ಅಗತ್ಯ ಪ್ರಗತಿಶೀಲರಿಗೆ ಏಕೆ ಉಂಟಾಯಿತು ಎಂದು ಪ್ರಶ್ನಿಸುತ್ತಾರೆ. ಅಲ್ಲದೆ ಸಮತಾವಾದೀ ದೃಷ್ಟಿಯ ಪ್ರಗತಿಶೀಲರಿಗೆ ಸಾಮ್ರಾಜ್ಯಶಾಹಿ ಧೋರಣೆಯ ರಾಜರ ಯುದ್ಧಗಳನ್ನು ವೈಭವೀಕರಿಸುವಂಥ ಬರವಣಿಗೆಯ ಅವಶ್ಯಕತೆ ಏಕೆ ಉಂಟಾಯಿತು ಎಂದು ಕೇಳುತ್ತಾರೆ. ಈ ಮೌಲ್ಯ ಪ್ರಜ್ಞೆಯ

ವಿಪರ್ಯಾಸಗಳಿಗೆ "ಕಾರಣಗಳನ್ನು ಸಾಹಿತ್ಯದ ನೆಲೆಯಲ್ಲಿ ಮಾತ್ರ ಹುಡುಕದೆ ಸಂಸ್ಕೃತಿ ಸಂದರ್ಭದ ನೆಲೆಯಲ್ಲಿಯೂ ಹುಡುಕಬೇಕು"[3] ಎಂದು ಹೇಳುತ್ತಾರೆ. ಈ ಮಾತುಗಳು ಪ್ರಗತಿಶೀಲರ ಸಾಹಿತ್ಯವನ್ನು 'ಸಂಸ್ಕೃತಿ ಚಿಂತನೆ'ಯ ನೆಲೆಯ ಹೊಸ ಬೆಳಕಿನಲ್ಲಿ ಮರುಶೋಧಿಸುವ ಅಗತ್ಯವನ್ನು ಪ್ರತಿಪಾದಿಸುತ್ತವೆ.

ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು 'ನವ್ಯ ವಿಮರ್ಶೆಯ ಸಂದರ್ಭಲ್ಲಂತೂ ನಮ್ಮ ವಿಮರ್ಶೆಯ ಸಂವೇದನೆ ಮತ್ತಷ್ಟು ಸಮಸ್ಯೆಗಳನ್ನೆದುರಿಸಿತು. ಒಬ್ಬ ಕವಿಯನ್ನೋ, ಒಂದು ಕಾವ್ಯ ಮಾದರಿಯನ್ನೋ ಒಪ್ಪಿಕೊಂಡ ಸಂವೇದನೆ ಮತ್ತೊಂದು ಮಾದರಿಯನ್ನು ಒಪ್ಪಿಕೊಳ್ಳಲಾಗದ, ಓದಿ ಸಂತೋಷಿಸಲಾಗದ, ಅನುಭವಿಸಲಾಗದ ಸ್ಥಿತಿ ತಲುಪಿತು. ಹೀಗಾಗಿ ಕನ್ನಡ ವಿಮರ್ಶೆ ಕೆಲವು ಕೃತಿಗಳನ್ನು, ಕೆಲವು ಕೃತಿಗಾರರನ್ನು ಮುಖ್ಯರೆಂದು ಪರಿಭಾವಿಸಿ, ಉಳಿದವರನ್ನು ನಿರ್ಲಕ್ಷಿಸಿತು.'[4]ಎಂದು ಹೇಳುತ್ತಾರೆ. ಅಲ್ಲದೆ ಕೆಲವೊಮ್ಮೆ ನಮ್ಮ ವಿಮರ್ಶೆ ಕೇವಲ ಅಕಾಡೆಮಿಕ್ ಆಸಕ್ತಿಗೆ ಮಾತ್ರ ಸೀಮಿತವಾಗಿ ಒಬ್ಬ ಲೇಖಕನ ಕೃತಿಗಳನ್ನು ಮತ್ತು ಆ ಲೇಖಕನ ಮಹತ್ವವನ್ನು ಕಲಾತ್ಮಕ ನೆಲೆಯಲ್ಲಿ ಮಾತ್ರ ಗಮನಿಸಿತು. ಒಟ್ಟು ಸಂಸ್ಕೃತಿಯ ನೆಲೆಯಿಂದ ಅವನನ್ನು ಅಲಕ್ಷಿಸಿತು. ಹೀಗೆ ನಿರ್ಲಕ್ಷ್ಯಕ್ಕೆ ಒಳಗಾದ ಕನ್ನಡ ಪ್ರತಿಭೆಗಳಲ್ಲಿ ಅನಕೃ ಒಬ್ಬರು ಎಂದು ನರಹಳ್ಳಿಯವರು ಹೇಳುತ್ತಾರೆ. ಇದು ಲಕ್ಷಿಸಬೇಕಾದ ವಿಚಾರ.ಹೀಗೆ ನಿರ್ಲಕ್ಷಕ್ಕೆ ಒಳಗಾದ ಪ್ರಗತಿಶೀಲ ಲೇಖಕರನ್ನು ಒಟ್ಟು ಕನ್ನಡ ಸಂಸ್ಕೃತಿಯ ನೆಲೆಯಲ್ಲಿ ಸಂಶೋಧನೆಗೆ ಒಳಪಡಿಸಬಹುದಾದ ಸಾಧ್ಯತೆಗಳನ್ನು ಗಮನಿಸಬಹುದು. ಕನ್ನಡ ವಿಮರ್ಶೆ ನವ್ಯ ಸಂದರ್ಭದ ನಂತರ ಜನಪ್ರಿಯತೆಯನ್ನು ಗುಮಾನಿಯಿಂದ ನೋಡಿತು; ಒಂದು ರೀತಿಯಲ್ಲಿ ಜನಪ್ರಿಯ ಲೇಖಕರನ್ನು ನಿರ್ಲಕ್ಷ್ಯದಿಂದ ಕಂಡಿತು. ಆದರೆ ಜನಪ್ರಿಯತೆಯ ಇತ್ಯಾತ್ಮಕ ಅಂಶಗಳ ಬಗೆಗೆ ನಾವಿಂದು ಚಿಂತಿಸಬೇಕಿದೆ. ಜನಪ್ರಿಯರಾಗಲೆಂದೇ ಸಾಹಿತ್ಯ ರಚಿಸುವುದಕ್ಕೂ, ಒಂದು ಕೃತಿ ಸಹಜವಾಗಿ ಜನಪ್ರಿಯವಾಗುವುದಕ್ಕೂ ಇರುವ ಅಂತರವನ್ನೂ ನಾವು ಗುರುತಿಸಬೇಕಿದೆ. ಜನಪ್ರಿಯತೆ ದೋಷವಾಗಬೇಕಿಲ್ಲ. ಆದರೆ ಜನಪ್ರಿಯ ಸಂಸ್ಕೃತಿಯ ಅಪಾಯಗಳನ್ನು ನಾವು ಅಲ್ಲಳೆಯುವಂತಿಲ್ಲ. ಪ್ರಗತಿಶೀಲ ಲೇಖಕರ ಜನಪ್ರಿಯತೆ ಸ್ವರೂಪ ಹಾಗೂ ಇಂದು ಅದರ ಇತ್ಯಾತ್ಮಕ ಅಂಶಗಳನ್ನು ಅಳವಡಿಸಿಕೊಳ್ಳಬಹುದಾದ ಕ್ರಮದ ಬಗ್ಗೆ ನಾವು ಸಂಶೋಧನಾ ಅಧ್ಯಯನ ಕೈಗೊಳ್ಳಬಹುದು.

ಅ.ನ.ಕೃ ಒಂದು ಹಂತದಲ್ಲಿ ಮಾನವತಾವಾದವನ್ನೇ ಪ್ರಗತಿಶೀಲತೆಯೆಂದು ಕರೆದರು. 'ಸಾಹಿತ್ಯ ಜೀವನದರ್ಶನ ಮಾಡಿಸುವುದರ ಜೊತೆಗೆ ಉನ್ನತ ಜೀವನದ ನಿರ್ಮಾಣಕ್ಕೆ ನೆರವಾಗಬೇಕು. ಸಾಹಿತಿಯ ಧ್ಯೇಯ ಲೋಕ ವಿಲಾಸವಲ್ಲ, ಲೋಕ ವಿಕಾಸ. ಅವನ ಗುರಿ ತಾತ್ಕಾಲಿಕ ಸಂತೋಷವನ್ನುಂಟು ಮಾಡುವುದಲ್ಲ. ಶಾಶ್ವತಾನಂದವನ್ನುಂಟು ಮಾಡುವುದು' ಎಂಬುದು ಅವರ ಅಭಿಮತವಾಗಿತ್ತು. ಈ ಹಿನ್ನೆಲೆಯಲ್ಲಿ ಪ್ರಗತಿಶೀಲ ಲೇಖಕರ ಕೃತಿಗಳಲ್ಲಿ ಅಭಿವ್ಯಕ್ತವಾದ **ಉದಾರ ಮಾನವತಾವಾದ** ನೆಲೆಗಳನ್ನು ಶೋಧಿಸಬಹುದು.

ಪ್ರಗತಿಶೀಲ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಕೆಲವು ಗುರುತುಗಳನ್ನು ಉಳಿಸಿ ಹೋಗಿದೆ. ಈ ಚಳುವಳಿ ಲೇಖಕನ ಮತ್ತು ಓದುಗನ ಸಾಮಾಜಿಕ ಪ್ರಜ್ಞೆಯನ್ನು ತೀಕ್ಷ್ಣಗೊಳಿಸಿತು. ವಾಸ್ತವತಾವಾದ ತನ್ನ ಪ್ರಭಾವವನ್ನು ವಿಸ್ತರಿಸಿಕೊಂಡಿತು. ಆಡುಮಾತಿನ ಬಳಕೆ ಹೆಚ್ಚಿತು. ವಿವರಗಳು ಹೆಚ್ಚು ದಟ್ಟವಾದವು. ಬರವಣಿಗೆ ಕಾವು ಮತ್ತು ವೇಗಗಳನ್ನು ಗಳಿಸಿಕೊಂಡಿತು. ಕನ್ನಡ ಕಾದಂಬರಿ ಸಾಹಿತ್ಯಕ್ಕೆ ಗ್ರಾಮ ಜೀವನ ಮತ್ತು

3. ನಾಯಕ್, ಜಿ.ಹೆಚ್. (2009). *ಸಾಹಿತ್ಯ ಸಮೀಕ್ಷೆ.* ಪುಟ. 200
4. ನರಹಳ್ಳಿ ಬಾಲಸುಬ್ರಹ್ಮಣ್ಯ. (2006). ಅ.ನ.ಕೃ. ಮತ್ತು ಕನ್ನಡ ಸಂಸ್ಕೃತಿ. ಪುಟ.107

ಕಾರ್ಮಿಕ ವರ್ಗದ ಜೀವನವನ್ನು ತಂದುಕೊಟ್ಟರು. ಭಾಷೆಗೆ ಹೊಸ ಕಸುವನ್ನು ತಂದುಕೊಟ್ಟರು.

ಪ್ರಗತಿಶೀಲ ಸಾಹಿತ್ಯ ಚಳುವಳಿಯನ್ನು ಕುರಿತು ಇದುವರೆಗೆ ಕನ್ನಡದಲ್ಲಿ ನಡೆದ ಅಧ್ಯಯನವನ್ನು ನೋಡಿದಾಗ ಈ ಸಾಹಿತ್ಯ ಚಳುವಳಿಯ ಬಹುತೇಕ ಲೇಖಕರು ವಿಮರ್ಶಕರ ಮತ್ತು ಸಂಶೋಧಕರ ಅವಜ್ಞೆಗೊಳಗಾಗಿರುವುದು ಕಂಡು ಬರುತ್ತದೆ. ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪ್ರಮುಖ ಲೇಖಕರ ಕಾದಂಬರಿ ಮತ್ತು ಕಥೆಗಳನ್ನು ಕುರಿತಂತೆ ಸಾಮಾಜಿಕ, ಆರ್ಥಿಕ ನೆಲೆಯಿಂದ ಅಧ್ಯಯನಗಳು ನಡೆದಿವೆ, ಆದರೆ ಸಂಸ್ಕೃತಿ ನೆಲೆಯಿಂದ, ಭಾಷೆ ಮತ್ತು ಶೈಲಿಯ ನೆಲೆಯಿಂದ, ಉದಾರ ಮಾನವತಾವಾದದ ನೆಲೆಯಿಂದ ಅಧ್ಯಯನಗಳು ಆಗಿರುವುದು ವಿರಳ. ಈ ನಿಟ್ಟಿನಲ್ಲಿ ಸಂಶೋಧನೆಯನ್ನು ಕೈಗೊಳ್ಳಲು ಅವಕಾಶಗಳಿವೆ.

**ಪರಾಮರ್ಶನ ಗ್ರಂಥಗಳು**


- ಅ.ನ.ಕೃಷ್ಣರಾಯರು. (1944). ಪ್ರಗತಿಶೀಲ ಸಾಹಿತ್ಯ. ಪ್ರಗತಿಶೀಲ ಲೇಖಕರ ಸಂಘ.
- ಆಮೂರ. ಜಿ.ಎಸ್. (1987). ಅ.ನ.ಕೃಷ್ಣ ರಾಯರು. ಸಾಹಿತ್ಯ ಅಕಾಡೆಮಿ.
- ನರಹಳ್ಳಿ ಬಾಲಸುಬ್ರಹ್ಮಣ್ಯ. (2006). ಅ.ನ.ಕೃ. ಮತ್ತು ಕನ್ನಡ ಸಂಸ್ಕೃತಿ. ಅಂಕಿತ ಪುಸ್ತಕ.
- ನಾಯಕ, ಜಿ.ಎಚ್. (2009). *ಸಾಹಿತ್ಯ ಸಮೀಕ್ಷೆ.* ಶ್ರೀ ರಾಘವೇಂದ್ರ ಪ್ರಕಾಶನ.
- ಶೇಷಗಿರಿರಾವ್, ಎಲ್.ಎಸ್. (2002). *ಹೊಸಗನ್ನಡ ಸಾಹಿತ್ಯ ಚರಿತ್ರೆ.* ಅಂಕಿತ ಪುಸ್ತಕ.